


# ಯಂತ್ರಗಳು ಮತ್ತು ಶ್ರಮಜೀವಿಗಳು

◆ ಪ್ರಶ್ನೆ: ನೀವು ಯಂತ್ರ ವಿರೋಧಿಯೇ?

ಗಾಂಧೀಜಿ: ಹೌದು, ನಾನು ಯಂತ್ರ ವಿರೋಧಿಯೇ. ತಾತ್ವಿಕವಾಗಿ ಹೇಳುವುದಾದರೆ ನಾನು ಆತ್ಮೋದ್ಧಾರಕ್ಕೆ ಸಹಕಾರಿಯಾಗದ ಶರೀರವೆಂಬ ಯಂತ್ರದ ವಿರೋಧಿ ಕೂಡ.

ಯಂತ್ರವು ಕಾರ್ಯ ನಿರ್ವಹಿಸುವ ವಿಧಾನಕ್ಕೆ ಶರೀರ ಒಂದು ಒಳ್ಳೆಯ ಉದಾಹರಣೆ. ಆದರೆ ಅದು ಆದರ್ಶದ ಮಾತಾಯಿತು. ವಾಸ್ತವವಾಗಿ ಶರೀರವನ್ನು ಬಿಟ್ಟು ಜೀವಿಸುವುದು ಹೇಗೆ ಸಾಧ್ಯವಿಲ್ಲವೋ, ಹಾಗೆ ಆಧುನಿಕ ಜಗತ್ತಿನಲ್ಲಿ ಯಂತ್ರಗಳ ನೆರವಿಲ್ಲದೆ ಬದುಕಲಾಗದು ಎನ್ನುವಂತಾಗಿಬಿಟ್ಟಿದೆ.